

## ಮಸ್ತಕದ ಮೇಲೆ ಪುಸ್ತಕ

ನಿಮಗೆ ಮನವರಿಕೆ ಮಾಡಲು ಸಾಧ್ಯವಾಗದಿದ್ದರೆ, ಗೊಂದಲಗೊಳಿಸಿ ಎಂಬ ಒಂದು ಸೂಕ್ತಿ ಇದೆ. ಅದರ ಪ್ರಕಾರ ಮೇಲ್ಛಾವಣಿಯಲ್ಲಿ ಕೆಲವು ಇಂಗ್ಲಿಷ್ ಪುಸ್ತಕಗಳನ್ನು ನೇತು ಹಾಕಲಾಗಿದೆ. ತಲೆ ಕೆಳಗಾದ ಲೆಕ್ಕಾಚಾರ ಅಂದ್ರೆ ಇದೇ ಇರಬೇಕು. ನಿಮ್ಮ ಮೆದುಳಿಗೆ ಇದರ ಅರ್ಥವಾಗಲು ಶೀರ್ಷಾಸನ ಮಾಡಿದರೆ ಸಾಧ್ಯವಾದೀತೇನೊ.

ಇದು ಮಣಿಪಾಲದ 'ನ್ಯಾಚುರಲ್ ಐಸ್ ಕ್ರೀಮ್' ಮಳಿಗೆಯಲ್ಲಿ ಕಂಡು ಬಂದ ಇಂಟೀರಿಯರ್ ಡೆಕೋರೇಷನ್. ಇಲ್ಲಿ ನಿಮಗೆ ಐಸ್‌ಕ್ರೀಮ್ ಮತ್ತು ಕ್ರಿಯೇಟಿವಿಟಿ ಇಷ್ಟ ಆಗಬಹುದು. ಐಸ್‌ಕ್ರೀಮ್ ತಿನ್ನುತ್ತಲೇ, ಇದನ್ನೆಲ್ಲಾ ಯಾಕೆ ಹೀಗೆ ಇಟ್ಟಿದ್ದಾರೆ ಅಂತ ಒಳ ಹೋದವರು ಯೋಚನೆ ಮಾಡುತ್ತಲಿರಲಿ ಎಂದು ಇರಬಹುದೇನೊ. ಅದನ್ನು ನೋಡುತ್ತಲೇ ಐಸ್‌ಕ್ರೀಮ್ ಎಷ್ಟು ತಿಂದೆವು ಅಂತ ತಿಳಿಯಲೇಬಾರದು ಅನ್ನುವ ಹಾಗಿದೆ ಈ ಸುಂದರ ಕಲ್ಪನೆ. ಹ್ಯಾರಿ ಪಾಟರ್, ಲಂಡನ್ ಕ್ರೈಮ್ಸ್, ರಿವೀಲಿಂಗ್ ದ ರೆವೊಲ್ಯೂಷನ್, ಡ್ರೀಮ್ ಚೇಸಿಂಗ್, ಡ್ರೀಮಿಂಗ್ ಲಂಡನ್ ಮುಂತಾದ ಪುಸ್ತಕಗಳ ಮುಖಪುಟಗಳು ಅಲ್ಲಿವೆ. ಅದನ್ನು ನೋಡಿ ಹೊರ ಬಂದಾಗ ಪುಸ್ತಕ ಓದುವ ಆಸಕ್ತಿ ಕೂಲಾಗಿ ಮೂಡಲಿ ಎಂಬ ಉದ್ದೇಶ ಇದ್ದರೆ ಅದು ಅರ್ಥಪೂರ್ಣ ಒಳಾಂಗಣ ವಿನ್ಯಾಸವಾಗುತ್ತದೆ. ಲೈಬ್ರರಿಗಳನ್ನೂ ಹೀಗೆ ಅಲಂಕರಿಸಿದರೆ ಇನ್ನಷ್ಟು ಅರ್ಥಪೂರ್ಣವಾಗುತ್ತದೆ.

–ಜೀವನ್ ಶೆಟ್ಟಿ, ಉಡುಪಿ

## ಕಸದಿಂದ ರಸದತ್ತ ಮಾವು

ನಮ್ಮೂರಿನಲ್ಲಿ ಈಗ ಸಾಸಿವೆ ಮಾವಿನ ಹಣ್ಣುಗಳ ಸೀಸನ್. ಸ್ವಲ್ಪ ಹುಳಿ, ಸ್ವಲ್ಪ ಸಿಹಿ ಇರುವ ಈ ಮಾವಿನ ಹಣ್ಣುಗಳನ್ನು ತಿನ್ನುವುದೇ ಒಂದು ರೀತಿಯ ಮಜಾ. ಈ ಹಣ್ಣಿನಿಂದ ಸಾಸಿವೆ, ನೀರಗೊಜ್ಜು ಇತ್ಯಾದಿಗಳನ್ನು ಮಾಡಿ ಊಟಕ್ಕೂ ಬಳಸಬಹುದು. ಈ ಹಣ್ಣುಗಳ ವಿಶೇಷತೆಯೇ ಅದರ ಗೊರಟೆಯ (ವಾಟೆ) ತುಂಬಾ ಕೂದಲಿನಂತಿರುವ ನವಿರಾದ ನಾರಿನ ಎಳೆಗಳು. ಹಣ್ಣನ್ನು ಚೆನ್ನಾಗಿ ಸವಿದು, ಚೀಪಿದ ಬಳಿಕ ಗೊರಟೆಯನ್ನು ಸೋಪಿನ ನೀರಿನಲ್ಲಿ ಒಂದು ದಿನ ನೆನೆಸಿಟ್ಟು, ಬಿಸಿಲಲ್ಲಿ ಚೆನ್ನಾಗಿ ಒಣಗಿಸಿದರೆ ನವಿರಾದ ಎಳೆಗಳು ಸ್ಪಷ್ಟವಾಗಿ ಗೋಚರಿಸುತ್ತವೆ. 'ಕಸದಿಂದ ರಸ' ಮಾಡುವುದರತ್ತ ಹೆಚ್ಚು ಆಸಕ್ತನಾದ ನನ್ನ ಮಗ ಎಳೆಗಳನ್ನೊಳಗೊಂಡ ಗೊರಟೆಯಲ್ಲಿ ಋಷಿ ಚಿತ್ರ ಮೂಡಿಸಿದ್ದಾನೆ. ಚಿತ್ರ ಮೂಡಿಸಿರುವುದಕ್ಕಿಂತ ಅವನ ಆಸಕ್ತಿ ನನ್ನಲ್ಲಿ ಅಚ್ಚರಿ ಮೂಡಿಸಿತು.

–ಎನ್.ಆರ್. ಹೆಗಡೆ, ಬೊಮ್ನಳ್ಳಿ, ಶಿರಸಿ







## ಹೊಯ್ಸಳರ ಕಾಲದ ಕೌಶಲ

ಬಾವಿಗೆ ತಡೆಗೋಡೆ ಕಟ್ಟುವುದು ಸುರಕ್ಷತೆಯ ದೃಷ್ಟಿಯಿಂದ ಅವಶ್ಯಕ. ಇಲ್ಲಿ ನೋಡುತ್ತಿರುವ ಬಾವಿಯ ಕಟ್ಟೆಯನ್ನು ಕಟ್ಟಲು ಕೇವಲ 4 ಹಾಸುಗಲ್ಲುಗಳನ್ನು ಉಪಯೋಗಿಸಲಾಗಿದೆ. ಗಾರೆಯನ್ನೂ ಬಳಸಿಲ್ಲ ಹಾಗೂ ಅಡಿಪಾಯವನ್ನೂ ಹಾಕಿಲ್ಲ. ಒಂದಕ್ಕೊಂದು ಒರಗಿಸಿ ನಿಲ್ಲಿಸಲಾದ ಈ ಹಾಸುಗಲ್ಲುಗಳ ಮೇಲುಭಾಗದಲ್ಲಿ ಕುಳಿ ಹಾಗೂ ಕೊಕ್ಕೆಯ ತಂತ್ರವನ್ನು ಬಳಸಲಾಗಿದೆ. ಇದರಿಂದ ಪ್ರತಿಯೊಂದು ಕಲ್ಲೂ ಪರಸ್ಪರ ಆಧಾರವಾಗಿ, ಭಾರವನ್ನು ಹಂಚಿಕೊಂಡು, ಬಾವಿಕಟ್ಟೆಯಾಗಿ ನೂರಾರು ವರ್ಷಗಳಿಂದಲೂ ನಿಂತಿವೆ.

ತರೀಕೆರೆಯ ಸಮೀಪದ ಅಮೃತೇಶ್ವರ ದೇವಾಲಯದ ಇತಿಹಾಸದ ಪ್ರಕಾರ ಈ ದೇವಸ್ಥಾನವು ಕ್ರಿ.ಶ. 1190ರಲ್ಲಿ ಹೊಯ್ಸಳರಿಂದ ಕಟ್ಟಲಾಗಿದೆ. ಅಲ್ಲಿಂದ ಇಲ್ಲಿಯವರೆಗೂ ಈ ಬಾವಿಕಟ್ಟೆಯ ಕಲ್ಲುಗಳು ಯಥಾಸ್ಥಿತಿಯಲ್ಲಿವೆ. ಅತ್ಯಂತ ಸರಳವೂ ಹಾಗೂ ಕೌಶಲ್ಯಪೂರ್ಣವೂ ಆದ ಅಂದಿನವರ ಈ ಜಾಣತನವನ್ನು ಮೆಚ್ಚಲೇಬೇಕು.

–ರಮೇಶ ಬಿ.ಎಂ., ಬೆಂಗಳೂರು